# Prospectus
# ಪರಿಚಯ ಪುಸ್ತಕ
# 2020-2021





ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಮಹಿಳಾ ಕಾಲೇಜು**

ಕೊಳ್ಳೇಗಾಲ

ದೂರವಾಣಿ ನಂ. ೦೮೨೨೪-೨೫೨೧೪೯,

ಫ್ಯಾಕ್ಸ್ ನಂ. ೦೮೨೨೪-೨೫೬೦೫೧

www.jsscwkgl.org.

Email.jsscwk@gmail.com

JSS Mahavidyapeetha

**JSS COLLEGE FOR WOMEN**

Kollegal

Ph : 08224-252149

Fax : 08224-256051

www.jsscwkgl.org.

Email.jsscwk@gmail.com



ಶ್ರೀ ಕ್ಷೇತ್ರ, ಸುತ್ತೂರು



ಶ್ರೀಮಠದ ಪುನರ್ನಿರ್ಮಿತ ಕಟ್ಟಡ, ಸುತ್ತೂರು



### ಪರಮಪೂಜ್ಯ ಜಗದ್ಗುರು ರಾಜಗುರುತಿಲಕ

## ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಇಪ್ಪತ್ತಮೂರನೆಯ ಜಗದ್ಗುರುಗಳಾದ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಶ್ರೀಮಠದ ಕಾರ್ಯವ್ಯಾಪ್ತಿಯನ್ನು ಅಭೂತಪೂರ್ವವಾಗಿ ವಿಸ್ತರಿಸಿದರು. ದಿನಾಂಕ 29-8-1916 ರಂದು ಜನಿಸಿದ ಪರಮಪೂಜ್ಯರು 28-2-1928ರಲ್ಲಿ ಪೀಠಾರೋಹಣ ಮಾಡಿದರು. ಪೂಜ್ಯರು ಶ್ರೀ ಪೀಠದ ಗುರು ಪರಂಪರೆಯ ಜ್ಞಾನಶಕ್ತಿ, ತಪಃಶಕ್ತಿ ಹಾಗೂ ಕ್ರಿಯಾಶಕ್ತಿಗಳೆಲ್ಲವೂ ಏಕೀಭವಿಸಿದಂತಹ ಮಹಾನ್ ಚೇತನರಾಗಿದ್ದರು. ಸಮಾಜದ ಎಲ್ಲ ಜ್ವಲಂತ ಸಮಸ್ಯೆಗಳಿಗೂ ಶಿಕ್ಷಣವೇ ಪರಿಹಾರ ಎನ್ನುವುದನ್ನು ಅರಿತಿದ್ದ ಪೂಜ್ಯರು ಉಚಿತ ಪ್ರಸಾದನಿಲಯಗಳನ್ನು ಮತ್ತು ಶಾಲಾ-ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಗ್ರಾಮೀಣ ಯುವಜನತೆಯನ್ನು ಅಕ್ಷರಸಂಸ್ಕೃತಿಯ ಕಡೆಗೆ ಸೆಳೆದರು. ಸ್ವತಂತ್ರಪೂರ್ವದ ದಿನಮಾನಗಳಲ್ಲಿ ಅದು ಸಾಮಾನ್ಯವಾದ ವಿಷಯವಾಗಿರಲಿಲ್ಲ. ಕಾಯಕತಪಸ್ವಿಗಳಾದ ಪೂಜ್ಯರು ತಮ್ಮ ಅಪೂರ್ವ ಧೀಶಕ್ತಿಯಿಂದ ಇಂಥ ಅಸಾಧ್ಯವಾದ ಕೆಲಸವನ್ನು ಸಾಧ್ಯವಾಗಿಸಿದರು. ನಾಡಿನ ಜನಸ್ತೋಮದ ಪಾಲಿಗೆ ಕಲ್ಪವೃಕ್ಷವಾದರು. ಅವರು ಬೆಳಗಿದ ಜ್ಞಾನಜ್ಯೋತಿಯ ಹಿನ್ನೆಲೆಯಲ್ಲಿ ನಾಡು ಹೊಸ ಬೆಳಕಿಗೆ ತನ್ನನ್ನು ತೆರೆದುಕೊಂಡಿತು. ಅನ್ನ, ಅರಿವು, ಆರೋಗ್ಯ, ಕಲೆ, ಸಾಹಿತ್ಯ, ಸಂಗೀತ, ಸಮಾಜ ಸುಧಾರಣೆ, ಧರ್ಮಜಾಗೃತಿ ಮೊದಲಾದ ಕ್ಷೇತ್ರಗಳಲ್ಲಿ ಶ್ರೀಮಠವು ಹಮ್ಮಿಕೊಂಡಿರುವ ಎಲ್ಲ ರೀತಿಯ ಸೇವಾ ಚಟುವಟಿಕೆಗಳಿಗೆ ಭದ್ರಬುನಾದಿ ಹಾಕಿದ ದ್ರಷ್ಟಾರರು ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಆ ವಿರಾಟ್ ಚೇತನದ ನೆನಪು ಇಂದಿಗೂ ಜನತೆಯಲ್ಲಿ ಕರ್ತೃತ್ವಶಕ್ತಿಯನ್ನು ಮೂಡಿಸುವ ದಿವ್ಯಮಂತ್ರವಾಗಿದೆ.

His Holiness jagadguru Dr. Sri Shivarathri Rajendra Mahaswamiji, the 23rd Pontiff of Sri Jagadguru Mahasamsthana Math, popularly known as Sri Suttur, inherited the legacy of the 10th century old Srimath at an early age. Born in 29-8-1916 His Holiness ascended the Peetha on 28-2-1928 when he was hardly twelve. He shared the responsibilities with his senior, Jagadguru Pattada Shivarathri Mahaswamigalu. He shouldered the responsibilities of the Srimath for more than half a century, taking each step towards serving of humanity in every possible way.

Besides being the patron of arts, literature and music, he was a scholar in Kannada and Sanskrit. He sacrificed his educational career to provide succor to the helpless poor. The burning desire to assuage the educational needs of hundreds of rural children, prompted His Holiness to start the first free hostel at Mysore in 1941. Thus began his journey of socioeconomic transformation of the region with the establishment of schools, Colleges and Sanskrit Pathashalas in and around Mysore. A single-minded dedication, aimed at welfare of all, goaded him to tread the path of sacrifice. Jagadguru Dr. Shivarathri Rajendra mahaswamiji had a strong vision of starting educational institutions in rural areas considering the hardship of students coming to cities seeking education. In order to make this possible, he started the Jagadguru Sri Shivarathreeshwara Mahavidyapeetha in 1954. Under the untiring efforts of Jagadguru Sri Shivarathreeshwara Rajendra Mahaswamiji, the Vidyapeetha has witnessed enormous growth in the field of education. Thousands of children, men and women have found solace under his boundless.

# ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಐತಿಹಾಸಿಕ ಮಹತ್ವವುಳ್ಳ ಕಾವೇರಿ ನದಿಯ ಮುಖ್ಯ ಉಪನದಿಗಳಲ್ಲೊಂದಾದ ಕಪಿಲೆಯ ಪ್ರಶಾಂತ ವಾತಾವರಣದಲ್ಲಿ ಸುಮಾರು ಸಾವಿರ ವರ್ಷಗಳ ಹಿಂದೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಆಧ್ಯಾತ್ಮಿಕ ಪರಂಪರೆ ಹಾಗೂ ಮೌಲ್ಯಯುತ ಆದರ್ಶಗಳಿಗಾಗಿ ಸುತ್ತೂರು ಶ್ರೀಕ್ಷೇತ್ರದಲ್ಲಿ ವೀರಸಿಂಹಾಸನ ಮಠವನ್ನು ಸ್ಥಾಪಿಸುವುದರ ಮೂಲಕ ಸಮಾಜದ ಸರ್ವತೋಮುಖ ಉನ್ನತಿಗೆ ಕಾರಣರಾದರು. ಅಲ್ಲದೆ ಮುಂದಿನ ಜಗದ್ಗುರು ಪರಂಪರೆಗೆ ಮೊದಲ ಹೆಜ್ಜೆಗುರುತಾದರು. ಇಂದು ಸುತ್ತೂರು ಶ್ರೀಕ್ಷೇತ್ರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕರ್ಮಭೂಮಿಯ ಪವಿತ್ರ ನೆಲೆವೀಡಾಗಿದೆ. ಜ್ಞಾನದೇಗುಲಗಳನ್ನು ಸ್ಥಾಪಿಸುವ ಮೂಲಕ ಶೈಕ್ಷಣಿಕ ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಏಳ್ಗೆಯ ಕೇಂದ್ರವಾಗಿದೆ.

ಪ್ರಾತಃಸ್ಮರಣೀಯರೂ, ತ್ರಿವಿಧ ದಾಸೋಹಿಗಳೂ, ಜ್ಞಾನಗಂಗೆಯ ಹರಿಕಾರರೂ, ನಾಡಿನ ಸಮಾಜೋದ್ಧಾರಕ್ಕಾಗಿ ಅಹರ್ನಿಶಿ ಶ್ರಮಿಸಿ ನಾಡಿನ ಮನೆ ಮನಗಳಲ್ಲಿ ಸದಾ ಸ್ಮರಣೀಯರೂ ಆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ 1954ರಲ್ಲಿ ವಿದ್ಯುಕ್ತವಾಗಿ ಸ್ಥಾಪನೆಗೊಂಡ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವು ನಾಡಿನ ಜನತೆಯ ಭವಿಷ್ಯವನ್ನು ಉತ್ತಮಗೊಳಿಸುವ ದಿಶೆಯಲ್ಲಿ ತನ್ನನ್ನು ಸಮರ್ಪಿಸಿಕೊಂಡಿದೆ. ಇದು ಒಂದು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆಯಾಗಿ ಬೆಳೆಯುತ್ತಿದ್ದು ಜನಸಾಮಾನ್ಯರ ಬದುಕಿನ ವಿಧಾನವನ್ನು ಸುಧಾರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮುನ್ನೂರಕ್ಕೂ ಹೆಚ್ಚು ಅಂಗಸಂಸ್ಥೆಗಳ ಮೂಲಕ ಸುಮಾರು ಐವತ್ತು ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣದ ಸೌಲಭ್ಯವನ್ನು ಒದಗಿಸಿಕೊಡುತ್ತಾ ಲಕ್ಷಾಂತರ ಮಂದಿಯ ಬದುಕಿನ ಮೇಲೆ ತನ್ನ ಪ್ರಭಾವ ಬೀರಿದೆ. ಆರು ದಶಕಗಳ ಹಿಂದೆ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡ ಜೆಎಸ್‌ಎಸ್ ಮಹಾವಿದ್ಯಾಪೀಠ ಇಂದು ಬೃಹತ್ ಸಾಮಾಜಿಕ ಶಕ್ತಿಯಾಗಿ ರೂಪುಗೊಂಡು ಭೌಗೋಳಿಕ ಮತ್ತು ಸಾಂಸ್ಕೃತಿಕ ಮೇರೆಗಳನ್ನು ದಾಟಿ ಮುನ್ನಡೆದಿದೆ. ಶಿಶುವಿಹಾರದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣದವರೆಗಿನ ವಿದ್ಯಾಸಂಸ್ಥೆಗಳು, ವೃದ್ಧಾಶ್ರಮ, ಅಂಗವಿಕಲ ಹಾಗೂ ಬುದ್ಧಿಮಾಂದ್ಯ ಮಕ್ಕಳಶಾಲೆ, ಗ್ರಾಮೀಣಾಭಿವೃದ್ಧಿ ಕೇಂದ್ರಗಳು, ಅನಾಥಾಲಯಗಳು, ವೃತ್ತಿಶಿಕ್ಷಣ ಕೇಂದ್ರಗಳು, ವಿಶ್ವವಿದ್ಯಾನಿಲಯ ಮುಂತಾದವು ಶೈಕ್ಷಣಿಕ ಹಾಗೂ ಸಾಮಾಜಿಕ ಮುನ್ನಡೆಯ ದ್ಯೋತಕಗಳಾಗಿವೆ. ಜೆಎಸ್‌ಎಸ್ ಮಹಾವಿದ್ಯಾಪೀಠ ಶೈಕ್ಷಣಿಕ ಸಂಸ್ಥೆಗಳ ಮೂಲಕ ಕರ್ನಾಟಕದಲ್ಲಷ್ಟೇ ಅಲ್ಲದೆ ನೆರೆಯ ತಮಿಳುನಾಡು, ಉತ್ತರಪ್ರದೇಶ ರಾಜ್ಯಗಳು ಮತ್ತು ಅಮೆರಿಕಾ, ಮಾರಿಷಸ್, ದುಬೈ ಮುಂತಾದ ದೇಶಗಳಲ್ಲಿ ಸೇವೆಯನ್ನು ವಿಸ್ತರಿಸಿದೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು 1986ರಲ್ಲಿ ಇಪ್ಪತ್ತನಾಲ್ಕನೆಯ ಜಗದ್ಗುರುಗಳಾಗಿ ಶ್ರೀಮಠದ ಚುಕ್ಕಾಣಿಯನ್ನು ಹಿಡಿದ ನಂತರ ತಮ್ಮ ಅಸಾಧಾರಣ ಮುನ್ನೋಟ ಮತ್ತು ಸಾಮರ್ಥ್ಯದಿಂದ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಅತ್ಯುತ್ತಮ ಶೈಕ್ಷಣಿಕ ಸೌಲಭ್ಯ ಒಳಗೊಂಡಿರುವ ಮತ್ತು ಹೊಸ ಹೊಸ ಜ್ಞಾನದಿಗಂತಗಳತ್ತ ಯುವಜನರ ಮನಸ್ಸುಗಳನ್ನು ಸೆಳೆಯುವತ್ತ ಕಾರ್ಯಶೀಲವನ್ನಾಗಿಸುವ ಜೊತೆಗೆ ಅದನ್ನು ಒಂದು ಅದ್ವಿತೀಯ ಹಾಗೂ ಅಗ್ರಪಂಕ್ತಿಯ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆಯಾಗಿಸುವಲ್ಲಿ ಅದ್ಭುತ ಯಶಸ್ಸು ಕಂಡಿದ್ದಾರೆ. ಪ್ರಾಕೃತಿಕ ವಿಕೋಪಗಳಿಂದ ತತ್ತರಿಸುತ್ತಿದ್ದ ಜನರ ಸಹಾಯಕ್ಕಾಗಿ "ಮೈಸೂರು ನಾಗರಿಕ ವೇದಿಕೆಯನ್ನು" ಸ್ಥಾಪಿಸಿ ಅವರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯ ಆಶಾಕಿರಣವಾಗಿ, ಲಕ್ಷಾಂತರ ಜನರ ಬದುಕಿನ ದಾರಿದೀಪವಾಗಿ ಮತ್ತೆ ಮೊದಲಿನ ಬದುಕಿಗೆ ಮರಳಬಹುದೆಂಬ ಭರವಸೆಯ ಬೆಳಕಾಗಿದ್ದಾರೆ.

# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ




ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠಕ್ಕೆ ನಾಂದಿ ಹಾಡಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮಹಿಳಾ ಶಿಕ್ಷಣದ ಮಹತ್ವವನ್ನು ಅರಿತು 1983ರಲ್ಲಿ ಕೊಳ್ಳೇಗಾಲ ಪಟ್ಟಣದಲ್ಲಿ ಆರಂಭಿಸಿದ ಜೆಎಸ್‌ಎಸ್ ಮಹಿಳಾ ಕಾಲೇಜು ಅಂದು ಕೇವಲ 28 ವಿದ್ಯಾರ್ಥಿನಿಯರಿಂದ ಪ್ರಾರಂಭವಾಗಿ ತನ್ನ ಮೂರು ದಶಕಗಳ ಇತಿಹಾಸದಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನೊಳಗೊಂಡ ಮಹಾವಿದ್ಯಾಸಂಸ್ಥೆಯಾಗಿ ಬೆಳೆದಿದೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿನಿಯರ ಸರ್ವತೋಮುಖ ವಿಕಾಸಕ್ಕೆ ಕಾರಣೀಭೂತವಾಗಿದೆ.


ಈ ವಿದ್ಯಾಲಯವು ಉತ್ತಮ ಗುಣಮಟ್ಟದ ಅನುಭವಿ ಅಧ್ಯಾಪಕರು, ಕ್ರಿಯಾಶೀಲ ಸಿಬ್ಬಂದಿವರ್ಗ, ಸುಸಜ್ಜಿತ ಪ್ರಯೋಗಾಲಯಗಳು, ವಿಶಾಲವಾದ ಕೊಠಡಿಗಳು, ಗಣಕೀಕೃತ ಗ್ರಂಥಭಂಡಾರ ಮುಂತಾದ ಸೌಲಭ್ಯಗಳನ್ನು ಒಳಗೊಂಡಿದೆ. ಸುಮಾರು ನಾಲ್ಕು ಎಕರೆ ಪ್ರದೇಶದ ಸುಂದರ ಹಸಿರು ತಾಣದಲ್ಲಿ ಈ ಕಾಲೇಜಿದೆ. ಪಟ್ಟಣದ ಪ್ರತಿಷ್ಠಿತ ಕಾಲೇಜುಗಳಲ್ಲಿ ಇದು ಒಂದಾಗಿದೆ. ದೇಹ, ಮನಸ್ಸುಗಳಿಗೆ ಮುದ ನೀಡುವ ಕ್ರೀಡಾ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚಟುವಟಿಕೆಗಳು ಇಲ್ಲಿ ಮೇಳೈಸಿವೆ. ವಿದ್ಯಾರ್ಥಿನಿಯರ ಶೈಕ್ಷಣಿಕ ಸಮಸ್ಯೆಗಳಿಗೆ ಶಿಕ್ಷಕವೃಂದ ತಕ್ಷಣ ಸ್ಪಂದಿಸಿ ಕಾರ್ಯಪ್ರವೃತ್ತವಾಗುತ್ತದೆ.

ಈ ವಿದ್ಯಾಲಯವು ವಿದ್ಯಾರ್ಥಿನಿಯರಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯ ಅನಾವರಣಕ್ಕೆ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವೇದಿಕೆಯನ್ನು ನಿರ್ಮಿಸಿದೆ. ಉತ್ತಮ ಗುಣಮಟ್ಟದ ಶೈಕ್ಷಣಿಕ ಸಾಧನೆಯ ಆಗರವಾಗಿದೆ.

ಈ ವಿದ್ಯಾಲಯವು ವಿವಿಧ ಸಂಯೋಜನೆಗಳನ್ನು ಒಳಗೊಂಡಿರುವ ಕಲಾವಿಭಾಗ (ಬಿ.ಎ.), ವಾಣಿಜ್ಯ ವಿಭಾಗ (ಬಿ.ಕಾಂ., ಮತ್ತು ಬಿ.ಬಿ.ಎ) ಗಳನ್ನು ಹೊಂದಿದೆ. ಸ್ನಾತಕೋತ್ತರ ವಿಭಾಗದಲ್ಲಿ ಎಂ.ಕಾಂ. ಕೋರ್ಸ್ ನಡೆಯುತ್ತಿದೆ.

ಈ ವಿದ್ಯಾ[illegible] ಪ್ರಗತಿಯಷ್ಟೇ ಅಲ್ಲ[illegible] ಭವಿಷ್ಯದ [illegible] ಉದ್ಯೋಗ [illegible] ಮಾಹಿತಿ ಹಾಗೂ ನೇಮಕಾತಿ ಕೇಂದ್ರ ನಿರಂತರವಾಗಿ ಶ್ರಮಿಸಿ ಅವರಿಗೆ ವಿವಿಧ ಸಂಸ್ಥೆ (ಕಂಪನಿ)ಗಳಲ್ಲಿ ಉದ್ಯೋಗಗಳನ್ನು ದೊರಕಿಸಿ ಕೊಡುತ್ತಿದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾನ್ಯತೆಯನ್ನು ಪಡೆದ ಸಂಸ್ಥೆ (ಕಂಪನಿ)ಗಳು ಕಾಲೇಜಿಗೆ ಆಗಮಿಸಿ ಸಂದರ್ಶನ ಹಾಗೂ ಲಿಖಿತ ಪರೀಕ್ಷೆಗಳ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದ್ಯೋಗಗಳನ್ನು ನೀಡುತ್ತಿವೆ. ಓದುತ್ತಿರುವಾಗಲೇ ಅವರ ಮುಂದಿನ ಭವಿಷ್ಯದ ಕನಸು ನನಸಾಗಲು ಶ್ರಮಿಸುತ್ತಿದೆ. ಸ್ವತಂತ್ರರಾಗಿ, ಬುದ್ಧಿವಂತರಾಗಿ, ಉತ್ತಮ ನಾಗರಿಕರಾಗಿ, ಆರ್ಥಿಕ ಸಬಲತೆಯನ್ನು ಪಡೆದು ಗೌರವಯುತವಾಗಿ ಬದುಕಲು ಮುಕ್ತ ಅವಕಾಶ ಗಳನ್ನು ಈ ವಿದ್ಯಾಲಯ ಕಲ್ಪಿಸುತ್ತಿದೆ.

ಪ್ರಸಕ್ತ ಸಾಲಿನಲ್ಲಿ IAS, KAS ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ತರಬೇತಿ ಕೇಂದ್ರದಿಂದ ಆಸಕ್ತ ವಿದ್ಯಾರ್ಥಿನಿಯರಿಗೆ Banking, Insurance ಇತ್ಯಾದಿ ಸೇವೆಗಳಿಗೆ ಸೇರಲು ಅರ್ಹತಾ ಪರೀಕ್ಷೆಗೆ ತರಬೇತಿ ನೀಡಲಾಗುವುದು, ಮುಂದುವರೆದು CA ಮತ್ತು CS ಓದಲು ಬಯಸುವ ವಿದ್ಯಾರ್ಥಿನಿಯರಿಗೂ ಕೂಡ ತರಬೇತಿ ಕೇಂದ್ರ ತೆರೆಯುವ ಉದ್ದೇಶವಿದೆ.



**ಪ್ರೊ. ಉಮೇಶ**
ಪ್ರಾಚಾರ್ಯರು

ಎಲ್ಲರಿಗೂ ಶುಭಾಶಯಗಳು

ನಮ್ಮ ಕಾಲೇಜಿನ ಪರಿಚಯ ಪುಸ್ತಿಕೆಯನ್ನು ತಮಗೆ ನೀಡಲು ಸಂತೋಷಿಸುತ್ತೇನೆ. ತಾವು ನಮ್ಮ ಕಾಲೇಜನ್ನು ಆಯ್ಕೆ ಮಾಡಲು ನಿರ್ಧರಿಸಿರುವುದಕ್ಕೆ ನಾನು ಆನಂದಿತನಾಗಿದ್ದೇನೆ. ನಮ್ಮ ಕಾಲೇಜು ಯು.ಜಿ.ಸಿ.ಯಿಂದ ನೋಂದಾಯಿಸಲ್ಪಟ್ಟಿದ್ದು, ನ್ಯಾಕ್ ಸಂಸ್ಥೆಯಿಂದ ಎರಡು ಬಾರಿ 'ಬಿ' ಶ್ರೇಣಿಯನ್ನು ಪಡೆದಿದೆ. ಪಟ್ಟಣದ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿರುವಂತಹ ನಮ್ಮ ಕಾಲೇಜನ್ನು ಆಯ್ಕೆ ಮಾಡಿರುವುದು ಹರ್ಷದಾಯಕ ವಿಷಯ.

ಕಾಲೇಜು ಅತ್ಯುತ್ತಮ ಗುಣಮಟ್ಟವುಳ್ಳ ಬೋಧನಾ ವ್ಯವಸ್ಥೆಯನ್ನು ಹೊಂದಿದ್ದು, ಕಾಲೇಜಿನ ಆತ್ಮ ಎಂದು ಕರೆಯಲ್ಪಡುವ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವಂತೂ ಜಿಲ್ಲೆಯಲ್ಲಿಯೇ ಅತ್ಯುತ್ತಮವೆನಿಸಿದೆ. ಮನಸ್ಸಿಗೆ ಮುದ ಮತ್ತು ಶಾಂತಿ ನೀಡುವಂತಹ ಸ್ವಚ್ಛ ಹಾಗೂ ಹಸಿರು ಸಮುಚ್ಚಯ, ಸುಸಜ್ಜಿತ ಸಭಾಂಗಣ, ಗಣಕೀಕೃತ ಗ್ರಂಥಾಲಯ, ಗಣಕಯಂತ್ರ ಪ್ರಯೋಗಾಲಯ, ಜಿಮ್ ವ್ಯವಸ್ಥೆಯೊಂದಿಗೆ ಕ್ರೀಡಾ ಸೌಲಭ್ಯ, ಶುಚಿ ಮತ್ತು ರುಚಿ ಆಹಾರದೊಂದಿಗೆ ಅತ್ಯುತ್ತಮವಾದ ವಿವಿಧ ಸೌಲಭ್ಯಗಳುಳ್ಳ ಮಹಿಳಾ ವಸತಿನಿಲಯ, ಉತ್ತಮ ಉಪಾಹಾರಗೃಹವನ್ನೊಳಗೊಂಡಂತೆ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡುತ್ತಿರುವುದರ ಜೊತೆಗೆ ಪೂಜ್ಯ ಶ್ರೀಗಳವರ ಆಶೀರ್ವಾದ ಮತ್ತು ಮಹಾವಿದ್ಯಾಪೀಠದ ಉತ್ತಮ ಮಾರ್ಗದರ್ಶನ ಕಾಲೇಜಿನ ಬೆಳವಣಿಗೆಗೆ ಸಹಕಾರಿ ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

ನಮ್ಮ ಕಾಲೇಜು ಬಿ.ಎ., ಬಿ.ಬಿ.ಎ., ಬಿ.ಕಾಂ. ಪದವಿಗಳ ಜೊತೆಗೆ ಎಂ.ಕಾಂ. ಸ್ನಾತಕೋತ್ತರ ಪದವಿಯನ್ನು ನೀಡುತ್ತಿರುವುದಲ್ಲದೆ, ಯುಜಿಸಿ ಪ್ರಾಯೋಜಿತ ಮತ್ತು ಇತರೆ ಸರ್ಟಿಫಿಕೇಟ್ ಆಧಾರಿತ ಪದವಿ ಶಿಕ್ಷಣವನ್ನು ನೀಡುತ್ತಿದೆ. "ಮಹಿಳಾ ಶಿಕ್ಷಣದಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ" ಎಂಬ ಧ್ಯೇಯ ವಾಕ್ಯದೊಂದಿಗೆ ವಿದ್ಯಾರ್ಥಿನಿಯರ ಸರ್ವತೋಮುಖ ಶ್ರೇಯೋಭಿವೃದ್ಧಿಗೆ (ಸಮಗ್ರ ಬೆಳವಣಿಗೆಗೆ) ವಿವಿಧ ಸಮಿತಿಗಳ ಮುಖಾಂತರ ಶೈಕ್ಷಣಿಕ ಉಜ್ವಲ ಭವಿಷ್ಯಕ್ಕಾಗಿ ಅಧ್ಯಾಪಕರು ಟೊಂಕ ಕಟ್ಟಿ ಶ್ರಮಿಸುತ್ತಿರುವುದು ಕಾಲೇಜಿನ ವಿಶೇಷವಾಗಿದೆ.

ಕಾಲೇಜು ಆಡಳಿತ ಮಂಡಳಿಯು ವರ್ಷದಲ್ಲಿ ಎರಡು ಬಾರಿ ಸಭೆ ನಡೆಸುವ ಮೂಲಕ ಕಾಲೇಜನ್ನು ಉನ್ನತ ಮಾರ್ಗದಲ್ಲಿ ಕರೆದೊಯ್ಯುತ್ತಿದ್ದು, ಪ್ರಸ್ತುತ ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದು, ಇದಕ್ಕೆ Covid-19 ಲಾಕ್‌ಡೌನ್ ಅವಧಿಯಲ್ಲಿ ವಿದ್ಯಾರ್ಥಿನಿಯರಿಗೆ ಆನ್‌ಲೈನ್ ಮೂಲಕ ನೀಡಿದ ಶಿಕ್ಷಣವೇ ಸಾಕ್ಷಿ.

ತಮಗೆ ನಮ್ಮ ಸಂಸ್ಥೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುವುದರ ಜೊತೆಗೆ ನಮ್ಮ ಸಮುಚ್ಚಯದಲ್ಲಿ (ಕ್ಯಾಂಪಸ್) ತಮ್ಮ ವಿದ್ಯಾರ್ಥಿ ಜೀವನ ಹಸನಾಗಲಿ ಎಂದು ಹಾರೈಸುತ್ತೇನೆ.

## ಪದವಿ ವಿಭಾಗಗಳು ಮತ್ತು ಸಂಯೋಜನೆ

| ಕ್ರ.ಸಂ. | ತರಗತಿಗಳು | ಐಚ್ಛಿಕ ವಿಷಯಗಳು | ಮಾಧ್ಯಮ |
|---|---|---|---|
| 1 | ಬಿ.ಎ. | ಇತಿಹಾಸ / ಅರ್ಥಶಾಸ್ತ್ರ / ರಾಜ್ಯಶಾಸ್ತ್ರ (ಎಚ್‌ಇಪಿ)<br>ಇತಿಹಾಸ / ಅರ್ಥಶಾಸ್ತ್ರ / ಕನ್ನಡ (ಎಚ್‌ಇಕೆ)<br>ಇತಿಹಾಸ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ (ಎಚ್‌ಇಜಿ) | ಕನ್ನಡ |
| 2 | ಬಿ.ಕಾಂ. | ಮೈಸೂರು ವಿಶ್ವವಿದ್ಯಾನಿಲಯದ ನಿಯಮಾನುಸಾರ | ಇಂಗ್ಲಿಷ್ |
| 3 | ಬಿ.ಬಿ.ಎ. | ಮೈಸೂರು ವಿಶ್ವವಿದ್ಯಾನಿಲಯದ ನಿಯಮಾನುಸಾರ | ಇಂಗ್ಲಿಷ್ |

## ಅಲ್ಪಾವಧಿ ಕೋರ್ಸ್

| | | | |
|---|---|---|---|
| 1 | ಬಿ.ಎ./ ಬಿ.ಕಾಂ.<br>ಬಿ.ಬಿ.ಎ. | ಕಂಪ್ಯೂಟರ್ ಕೋರ್ಸ್ | ಇಂಗ್ಲಿಷ್ |
| 2 | ಬಿ.ಎ./ ಬಿ.ಕಾಂ.<br>ಬಿ.ಬಿ.ಎ. | ಸ್ಪೋಕನ್ ಇಂಗ್ಲಿಷ್ | ಇಂಗ್ಲಿಷ್ |
| 3 | ಬಿ.ಎ./ ಬಿ.ಕಾಂ.<br>ಬಿ.ಬಿ.ಎ. | ಭಾರತೀಯ ಸಂಸ್ಕೃತಿ | ಕನ್ನಡ |
| 4 | ಬಿ.ಕಾಂ. | ಎ) ಮಾನವ ಸಂಪನ್ಮೂಲ ನಿರ್ವಹಣೆ (ಎಚ್‌ಆರ್‌ಎಂ)<br>ಬಿ) ಇಂಟರ್‌ನ್ಯಾಷನಲ್ ಫೈನಾನ್ಸಿಯಲ್ ರಿಪೋರ್ಟಿಂಗ್ ಸ್ಟಾಂಡರ್ಡ್ಸ್ (ಐಎಫ್‌ಆರ್‌ಎಸ್) | ಇಂಗ್ಲಿಷ್ |
| 5 | ಬಿ.ಬಿ.ಎ. | ಎ) ಮಾರುಕಟ್ಟೆ ನಿರ್ವಹಣೆ (ಮಾರ್ಕೆಟಿಂಗ್)<br>ಬಿ) ಲೆಕ್ಕ ಪರಿಶೋಧನೆ (ಆಡಿಟಿಂಗ್) | ಇಂಗ್ಲಿಷ್ |

**ಭಾಷಾ ವಿಷಯಗಳು :** ಮೇಲಿನ ಯಾವುದಾದರೊಂದು ವಿಭಾಗ / ಸಂಯೋಜನೆಯ ಜೊತೆಗೆ ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಬೇಕು.

**ವೃತ್ತಿ ಮಾರ್ಗದರ್ಶಕ ಕಾರ್ಯಕ್ರಮಗಳು/ಅಲ್ಪಾವಧಿ ಕೋರ್ಸ್‌ಗಳು:** ಪದವಿ ವ್ಯಾಸಂಗ ಮಾಡುತ್ತಿರುವಾಗ ವಿದ್ಯಾರ್ಥಿನಿಯರು ಹೆಚ್ಚುವರಿ ಕೋರ್ಸುಗಳನ್ನು ಅಭ್ಯಸಿಸಿ ವ್ಯಕ್ತಿಗತ ಕೌಶಲ್ಯ ವೃದ್ಧಿಸಿಕೊಂಡು ಉದ್ಯೋಗಾವಕಾಶವನ್ನು ಹೆಚ್ಚಿಸಿಕೊಳ್ಳಲು ವೃತ್ತಿ ಮಾರ್ಗದರ್ಶಕ ಕೋರ್ಸುಗಳನ್ನು ನಡೆಸಲಾಗುತ್ತದೆ.

### ಅರ್ಜಿಯೊಂದಿಗೆ ಸಲ್ಲಿಸಬೇಕಾದ ಪ್ರಮಾಣ ಪತ್ರಗಳು

1. ಅಂಕಪಟ್ಟಿಯ ದೃಢೀಕೃತ ಜೆರಾಕ್ಸ್ ಪ್ರತಿ.
2. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (ಅರ್ಜಿ ಜೊತೆಯಲ್ಲಿ ಒಂದು, ಪ್ರವೇಶ ಪಡೆಯುವಾಗ ಮತ್ತೆ ಮೂರು ಭಾವಚಿತ್ರಗಳು)
3. ಎಸ್.ಸಿ./ಎಸ್.ಟಿ./ವರ್ಗ–2ಎ/ವರ್ಗ–2ಬಿ/ವರ್ಗ–3ಎ/ವರ್ಗ–3ಬಿ ಈ ವರ್ಗಗಳಿಗೆ ಸೇರಿದವರು ಅಗತ್ಯ ಪ್ರಮಾಣಪತ್ರವನ್ನು ಅರ್ಜಿ ಸಲ್ಲಿಸುವಾಗಲೇ ನೀಡಬೇಕು. ಅನಂತರ ನೀಡಿದ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
4. ಬೋಧನಾ ಶುಲ್ಕವನ್ನು ಮರುಬರಿಕೆ ಮಾಡಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ವಾರ್ಷಿಕ ಆದಾಯ

2,00,000/- ರೂ.ಗಳ ದೃಢೀಕೃತ ಆದಾಯ ಪ್ರಮಾಣ ಪತ್ರದ ಜೊತೆಗೆ ಸರ್ಕಾರಕ್ಕೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬೇಕು.

5. ಹೊರ ರಾಜ್ಯ ಮತ್ತು ಹೊರ ದೇಶದವರು ವಲಸೆ ಪ್ರಮಾಣ ಪತ್ರ ಹಾಗೂ ಇತರ ಅಗತ್ಯ ಪ್ರಮಾಣ ಪತ್ರಗಳನ್ನು ಲಗತ್ತಿಸಿರಬೇಕು.

**ಅಪೂರ್ಣ ಹಾಗೂ ಅವಶ್ಯ ದಾಖಲಾತಿಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

ಅರ್ಜಿ ಜೊತೆಯಲ್ಲಿ ದಾಖಲಾತಿ ಪತ್ರಗಳ ದೃಢೀಕೃತ ಪ್ರತಿಗಳನ್ನು ಮಾತ್ರ ಲಗತ್ತಿಸಿರಬೇಕು. ಮೂಲ ದಾಖಲಾತಿ ಪತ್ರಗಳನ್ನು ಪ್ರವೇಶ ಸಂದರ್ಭದಲ್ಲಿ ತಪ್ಪದೆ ಹಾಜರುಪಡಿಸಬೇಕು. ಮೂಲ ಅಂಕಪಟ್ಟಿಯೊಂದಿಗೆ ಎರಡು ಜೆರಾಕ್ಸ್ ಪ್ರತಿಗಳನ್ನು ನೀಡಬೇಕು.

ಪ್ರವೇಶಕ್ಕೆ ಅರ್ಹರಾದವರ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಸೂಚಿತ ದಿನಾಂಕದೊಳಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳೊಂದಿಗೆ ನಿಗದಿತ ಶುಲ್ಕವನ್ನು ಪಾವತಿಸಿ ದಾಖಲಾಗುವುದು.

**ಪ್ರವೇಶ ಪ್ರಕ್ರಿಯೆ :**

ಪದವಿಪೂರ್ವ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಮಾತ್ರ ವಿಶ್ವವಿದ್ಯಾನಿಲಯದ ನಿಯಮಾವಳಿಗನುಗುಣವಾಗಿ ಬಿ.ಎ., ಬಿ.ಕಾಂ., ಬಿ.ಬಿ.ಎ., ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಕಛೇರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಮಂಡಳಿಯವರು ನಡೆಸುವ ಮೂರು ವರ್ಷದ ಕಮರ್ಷಿಯಲ್ ಪ್ರಾಕ್ಟೀಸ್ ಅಥವಾ ಇಂಜಿನಿಯರಿಂಗ್ ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಎರಡನೆಯ ಬಿ.ಕಾಂ. ಮತ್ತು ಬಿ.ಬಿ.ಎ. ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

**ವಿದ್ಯಾರ್ಥಿನಿಯರ ಗಮನಕ್ಕೆ**

1. ವಿದ್ಯಾರ್ಥಿನಿಯರು ತಾವು ಅಭ್ಯಸಿಸಲು ಆಯ್ದುಕೊಂಡ ಪದವಿ ತರಗತಿಯನ್ನು ನಿಗದಿತ ಅವಧಿಯ ಎರಡರಷ್ಟರಲ್ಲಿ ತೇರ್ಗಡೆ ಹೊಂದಬೇಕು.
2. ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.
3. ಪರೀಕ್ಷಾ ಶುಲ್ಕವನ್ನು ಪ್ರತಿ ಚತುರ್ಮಾಸದಲ್ಲಿಯೂ ಪಾವತಿಸುವುದು ಕಡ್ಡಾಯವಾಗಿದೆ. ಇದರಿಂದ ಮುಂದಿನ ಚತುರ್ಮಾಸಕ್ಕೆ ಪ್ರವೇಶ ಪಡೆಯಲು ಅರ್ಹತೆಯು ಸಿಗುತ್ತದೆ.
4. ಮೊಬೈಲ್ ಫೋನ್‌ಗಳನ್ನು ಕಾಲೇಜಿನ ಒಳ ಆವರಣದಲ್ಲಿ ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ತಪ್ಪಿದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು.
5. ವಿದ್ಯಾರ್ಥಿಗಳು ಕಾಲೇಜಿನ ಎಲ್ಲಾ ನಿಯಮಗಳಿಗೆ ಬದ್ಧರಾಗಿರಬೇಕು.

**ಮಾಧ್ಯಮ :**

ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡಲಾಗುವುದು. ವಿದ್ಯಾರ್ಥಿನಿಯರು ಕನ್ನಡ ಅಥವಾ ಇಂಗ್ಲಿಷ್ ಭಾಷೆಗಳಲ್ಲಿ ಪರೀಕ್ಷೆಗಳನ್ನು ಬರೆಯಬಹುದು.

**ಹಾಜರಾತಿ:**

1. ಪ್ರತಿ ವಿಷಯದಲ್ಲೂ ಶೇ. 75% ರಷ್ಟು ಹಾಜರಾತಿ ಕಡ್ಡಾಯ.
2. ಹಾಜರಾತಿ ಕೊರತೆ ಇರುವವರ ಪಟ್ಟಿಯನ್ನು ಪ್ರತಿ ಚತುರ್ಮಾಸದ ಕೊನೆಯಲ್ಲಿ ಕಾಲೇಜಿನ ಸೂಚನಾಫಲಕದಲ್ಲಿ ಹಾಕಲಾಗುತ್ತದೆ.
3. ಹಾಜರಾತಿ ಕೊರತೆ ಇರುವವರಿಗೆ ಪರೀಕ್ಷೆ ಬರೆಯಲು ಅನುಮತಿ ನೀಡುವುದಿಲ್ಲ.

## ಪರಿಹಾರ ತರಗತಿಗಳು:

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ವಿದ್ಯಾರ್ಥಿನಿಯರಿಗೆ ಯುಜಿಸಿ ಪ್ರಾಯೋಜಿತ ಪರಿಹಾರ ಬೋಧನಾ ತರಗತಿಗಳನ್ನು ನಡೆಸಲಾಗುವುದು.

## ಆಂತರಿಕ ಮೌಲ್ಯಮಾಪನ:

ಚತುರ್ಮಾಸ ಯೋಜನೆ ಜಾರಿಯಲ್ಲಿರುವುದರಿಂದ ಪ್ರತಿ ಚತುರ್ಮಾಸದಲ್ಲೂ ಆಂತರಿಕ ಮೌಲ್ಯಮಾಪನ ಕಡ್ಡಾಯವಾಗಿದೆ. ಆಂತರಿಕ ಮೌಲ್ಯಮಾಪನದಲ್ಲಿ ; ಮೌಖಿಕ ಪರೀಕ್ಷೆ, ಕಿರುಪರೀಕ್ಷೆಗಳು, ನಿಯೋಜಿತ ಕಾರ್ಯ, ಸೆಮಿನಾರ್‌ಗಳು, ಬೇರೆ ಸಂಸ್ಥೆಗಳಿಗೆ ಭೇಟಿ ನೀಡುವುದು ಮತ್ತು ಅದಕ್ಕೆ ಸಂಬಂಧಪಟ್ಟ ವರದಿ ತಯಾರಿಸುವುದು, ಇವೆಲ್ಲವೂ ಸೇರಿರುತ್ತವೆ. ವಿದ್ಯಾರ್ಥಿನಿಯರಿಗೆ ಈ ಆಂತರಿಕ ಮೌಲ್ಯಮಾಪನವು ಪ್ರತಿ ಚತುರ್ಮಾಸ ಯೋಜನೆಯ ಬಹುಮುಖ್ಯ ಭಾಗವಾಗಿರುವುದರಿಂದ ಶ್ರದ್ಧೆಯಿಂದ ಇದರಲ್ಲಿ ಕಾರ್ಯನಿರ್ವಹಿಸಬೇಕು.

## ವಸ್ತ್ರ–ಉಡುಪು–ಪಾದರಕ್ಷೆ:

ವಿದ್ಯಾರ್ಥಿನಿಯರು ಗೌರವಯುತವಾದ ಉಡುಪುಗಳನ್ನು ಧರಿಸಿ ಕಾಲೇಜಿಗೆ ಬರತಕ್ಕದ್ದು. [illegible] ಓಡಾಡುವಾಗ ಸದ್ದು ಮಾಡದ ಪಾದರಕ್ಷೆಗಳನ್ನು ಮಾತ್ರವೇ ಬಳಸತಕ್ಕದ್ದು. ಎಂ.ಎ. ವಿದ್ಯಾರ್ಥಿನಿಯರಿಗೆ ಬ್ಲೇಜರ್ ಸೂಟ್ ಸಹಿತ ಸಮವಸ್ತ್ರ ನಿಗದಿಪಡಿಸಲಾಗಿದೆ. ಬಿ.ಎ./ಬಿ.ಕಾಂ. ವಿದ್ಯಾರ್ಥಿನಿಯರು ನಿಗದಿತ ಸಮವಸ್ತ್ರ ಧರಿಸಬೇಕು.

## ಕಾಲೇಜಿನಲ್ಲಿ ಪಾಲಿಸಬೇಕಾದ ಶಿಸ್ತು:

ಕಾಲೇಜಿನಲ್ಲಿ ಪ್ರತಿ ವಿದ್ಯಾರ್ಥಿನಿಯೂ ಕಾಲೇಜಿನ ಶಿಸ್ತು ಮತ್ತು ನಡವಳಿಕೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಾಲೇಜಿನ ಒಳಾಂಗಣದಲ್ಲಿ ಅನಗತ್ಯವಾಗಿ ಓಡಾಡುವುದು, ತರಗತಿಗಳು ನಡೆಯುತ್ತಿರುವಾಗ ಗದ್ದಲ ಮಾಡುವುದು, ತರಗತಿಗಳಿಗೆ ತಡವಾಗಿ ಬರುವುದು, ಗೈರುಹಾಜರಾಗುವುದು, ಕಾಲೇಜಿನ ಹೊರಾಂಗಣದಲ್ಲಿ ಅನವಶ್ಯಕವಾಗಿ ಕುಳಿತುಕೊಳ್ಳುವುದು ಇತ್ಯಾದಿ ಚಟುವಟಿಕೆಗಳು ವಿದ್ಯಾರ್ಥಿನಿಯರಿಗಾಗಲಿ, ಕಾಲೇಜಿಗಾಗಲಿ ಗೌರವ ತರುವ ವರ್ತನೆಗಳಲ್ಲವಾದ್ದರಿಂದ ಇವುಗಳನ್ನು ನಿಷೇಧಿಸಲಾಗಿದೆ. ಪ್ರಾಚಾರ್ಯರು, ಅಧ್ಯಾಪಕರು ಮತ್ತು ಸಿಬ್ಬಂದಿಯೊಡನೆ ಅನುಚಿತವಾಗಿ ವರ್ತಿಸುವ ವಿದ್ಯಾರ್ಥಿನಿಯರ ಪ್ರವೇಶವನ್ನು ರದ್ದುಪಡಿಸಲಾಗುವುದು. ಈ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿ ಹೊರಹೋಗುವ ಪ್ರತಿ ವಿದ್ಯಾರ್ಥಿನಿಯೂ ಉನ್ನತ ಶೈಕ್ಷಣಿಕ ಸಾಧನೆಯೊಡನೆ, ಶಿಸ್ತಿನ ಜೀವನವನ್ನು ರೂಢಿಸಕೊಳ್ಳಬೇಕೆಂಬುದೇ ಸಂಸ್ಥೆಯ ಉದ್ದೇಶವಾಗಿದೆ.

ಪ್ರತಿ ವಿದ್ಯಾರ್ಥಿನಿಯು ಈ ಕೆಳಗಿನ ಐದು ತತ್ವಗಳನ್ನು ಅಳವಡಿಸಿಕೊಳ್ಳಬೇಕು.

1. ವಿದ್ಯುತ್ ಹಾಗೂ ನೀರಿನ ಮಿತ ಬಳಕೆ
2. ಪ್ಲಾಸ್ಟಿಕ್ ನಿಷೇಧ
3. ಆಹಾರ ವ್ಯರ್ಥಮಾಡದಿರುವುದು
4. ಕಾಲೇಜು ಆವರಣವನ್ನು ಸ್ವಚ್ಛವಾಗಿಡುವುದು
5. ಕಾಲೇಜು ಆವರಣವನ್ನು ಹಸಿರಾಗಿಡುವುದು

# ಶೈಕ್ಷಣಿಕ ವರ್ಷದ ಆರಂಭ

## ಕಾಲೇಜಿನ ಶೈಕ್ಷಣಿಕ ವೇಳಾಪಟ್ಟಿಯು ಮೈಸೂರು ವಿಶ್ವವಿದ್ಯಾನಿಲಯದ ವೇಳಾಪಟ್ಟಿಗೆ ಅನುಗುಣವಾಗಿರುತ್ತದೆ

### ಗ್ರಂಥಾಲಯ

ನ್ಯೂಜೆನ್‌ಲಿಬ್ ತಂತ್ರಾಂಶವನ್ನು ಕಾಲೇಜಿನ ಗ್ರಂಥಾಲಯದಲ್ಲಿ ಅಳವಡಿಸಿಲಾಗಿದೆ. ಇಲ್ಲಿ ವಿಶಾಲವಾದ ಓದುವ ಮತ್ತು ಪರಾಮರ್ಶನ ವಿಭಾಗಗಳಿವೆ. ಗ್ರಂಥಾಲಯದಲ್ಲಿ ಸುಮಾರು 20,000 ಪುಸ್ತಕಗಳಿವೆ. ವಾರಕ್ಕೊಮ್ಮೆ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ನೀಡಲಾಗುವುದು. ಗ್ರಂಥಾಲಯ ಇಂಟರ್‌ನೆಟ್ ವ್ಯವಸ್ಥೆಯನ್ನು ಹೊಂದಿದೆ. ಇನ್‌ಫ್ಲಿಬ್‌ನೆಟ್ ವ್ಯವಸ್ಥೆಯನ್ವಯ ಗ್ರಂಥಾಲಯದಲ್ಲಿ ಇ-ಜರ್ನಲ್‌ಗಳಿದ್ದು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯದ ಸೌಲಭ್ಯಗಳನ್ನು ಪಡೆದುಕೊಳ್ಳಲಿ ಎಂಬುದು ನಮ್ಮ ಅಪೇಕ್ಷೆ.




### ವಿದ್ಯಾರ್ಥಿವೇತನಗಳು / ನಗದು ಪುರಸ್ಕಾರಗಳು

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಿದ್ಯಾರ್ಥಿವೇತನಗಳ ಜೊತೆಗೆ ಜೆಎಸ್‌ಎಸ್ ಮಹಾವಿದ್ಯಾಪೀಠವು ವಿವಿಧ ನಗದು ಪುರಸ್ಕಾರಗಳನ್ನು ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ನೀಡಿ ಪ್ರೋತ್ಸಾಹಿಸುತ್ತಿದೆ. ಇದರ ಜೊತೆಗೆ ಕಾಲೇಜು ತನ್ನ ದತ್ತಿ ನಿಧಿಯಿಂದ ಅನೇಕ ವಿದ್ಯಾರ್ಥಿವೇತನಗಳನ್ನು ಅರ್ಹ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ನೀಡುತ್ತಿದೆ.

* ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರಿಗೆ ಭಾರತಸರ್ಕಾರ ನೀಡುವ ವಿದ್ಯಾರ್ಥಿವೇತನ
* ಕೆಟಗರಿ I, IIA, IIB, IIIA, IIIB ವರ್ಗದ ವಿದ್ಯಾರ್ಥಿನಿಯರಿಗೆ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿವೇತನ.
* ಸರ್ ಸಿ.ವಿ. ರಾಮನ್ ವಿದ್ಯಾರ್ಥಿವೇತನ
* ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ
* EBL ವಿದ್ಯಾರ್ಥಿವೇತನ
* ಅಲ್ಪಸಂಖ್ಯಾತ ವಿದ್ಯಾರ್ಥಿವೇತನ
* ವಿಕಲಚೇತನ ವಿದ್ಯಾರ್ಥಿವೇತನ
* MHRD ವಿದ್ಯಾರ್ಥಿವೇತನ
* ರಾಜೀವ್‌ಗಾಂಧಿ ವಿದ್ಯಾರ್ಥಿವೇತನ
* ಇಂದಿರಾಗಾಂಧಿ ವಿದ್ಯಾರ್ಥಿವೇತನ (ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ)

## ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವೇದಿಕೆ :



ವ್ಯಾಸಂಗಾವಧಿಯಲ್ಲಿಯೇ ವಿದ್ಯಾರ್ಥಿನಿಯರಲ್ಲಿ ಹುದುಗಿರುವ ವಿವಿಧ ಪ್ರತಿಭೆಗಳನ್ನು ಈ ವೇದಿಕೆಯ ಮೂಲಕ ಹೊರತರುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ. ಆಯೋಜಿಸುವ ವಿವಿಧ ಸಮಾರಂಭಗಳ ಬಹುತೇಕ ನಿರ್ವಹಣೆ ಈ ಸಾಂಸಾ ವೇದಿಕೆಯ ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳಿಂದಲೇ ನಡೆಯುತ್ತದೆ. ಈ ಮೂಲಕ ಅವರಲ್ಲಿನ ನಾಯಕತ್ವ ಹಾಗೂ ಸಂಘಟನಾ ಚಾತುರ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ.

## ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಹಾಗೂ ಯುವ ರೆಡ್‌ಕ್ರಾಸ್ ಘಟಕ :



ಸಮಾಜ ಸೇವಾ ಚಟುವಟಿಕೆಗಳು ವಿದ್ಯಾರ್ಥಿನಿಯರ ವ್ಯಕ್ತಿತ್ವ ವಿಕಸನ ಹಾಗೂ ಆತ್ಮವಿಶ್ವಾಸ ಬೆಳವಣಿಗೆಗೆ ಪೂರಕವಾಗುತ್ತವೆ. ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ಮೇಲ್ಕಂಡ ಘಟಕಗಳು ದೈನಂದಿನ ಚಟುವಟಿಕೆಗಳೊಂದಿಗೆ ವಾರ್ಷಿಕ ಶಿಬಿರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಏರ್ಪಡಿಸಿ ಅಲ್ಲಿನ ಜನತೆಯಲ್ಲಿ ಸ್ವಚ್ಛತೆ, ಪರಿಸರ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಬೆಳೆಸುವ ಮೂಲಕ ಪ್ರಶಂಸನೀಯ ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ಪ್ರತಿವರ್ಷವೂ ಗಾಂಧೀ ಜಯಂತಿಯಂದು ರಕ್ತದಾನ ಶಿಬಿರ ಏರ್ಪಡಿಸಲಾಗುತ್ತದೆ.

## ಕ್ರೀಡಾ ಚಟುವಟಿಕೆಗಳು :



ಪಾಠಪ್ರವಚನಗಳ ಜೊತೆಗೆ ಕಾಲೇಜಿನಲ್ಲಿ ಕ್ರೀಡಾ ಚಟುವಟಿಕೆಗಳಿಗೂ ಉತ್ತಮ ಅವಕಾಶಗಳನ್ನು ಒದಗಿಸಲಾಗಿದೆ. ಈ ಅವಕಾಶಗಳನ್ನು ಉಪಯೋಗಿಸಿಕೊಂಡು ಅಂತರಕಾಲೇಜು, ರಾಜ್ಯಮಟ್ಟ ಮತ್ತು ರಾಷ್ಟ್ರಮಟ್ಟದಲ್ಲಿಯೂ ತಮ್ಮ ಕ್ರೀಡಾಪ್ರತಿಭೆಯನ್ನು ಪ್ರದರ್ಶಿಸಿದ ಅನೇಕ ವಿದ್ಯಾರ್ಥಿನಿಯರು ಕಾಲೇಜಿನಲ್ಲಿದ್ದಾರೆ. ಯುಜಿಸಿ ಅನುದಾನದಲ್ಲಿ ವಿದ್ಯಾರ್ಥಿನಿಯರ ದೈಹಿಕ ಆರೋಗ್ಯವನ್ನು ವೃದ್ಧಿಪಡಿಸಲು ಅತ್ಯಾಧುನಿಕ ಉಪಕರಣಗಳನ್ನೊಳಗೊಂಡ ಮಲ್ಟಿಜಿಮ್ ಹಾಗೂ ಒಳಾಂಗಣ ಕ್ರೀಡೆಗಳಿಗೆ ವ್ಯವಸ್ಥೆ ಮಾಡಲಾಗಿದೆ.

**ರ್‍ಯಾಗಿಂಗ್ ಪ್ರತಿರೋಧಕ ಕೇಂದ್ರ :**



ಕಾಲೇಜಿನ ಆವರಣದಲ್ಲಿ ರ್‍ಯಾಗಿಂಗ್‌ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇಂತಹ ದುರ್ನಡತೆಗಳಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿನಿಯರ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.



**ಪರಿಸರ ಕೂಟ:**

ಹಸಿರಿನಿಂದ ಕಂಗೊಳಿಸುತ್ತಿರುವ ನಮ್ಮ ಕಾಲೇಜಿನ ಆವರಣವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಕೃತಿ ಸ್ನೇಹಿಯಾಗಿಸುವ ಮತ್ತು ಆ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಈ ಪರಿಸರ ಕೂಟ ಅಸ್ತಿತ್ವಕ್ಕೆ ಬಂದಿದೆ. ವಿದ್ಯಾರ್ಥಿನಿಯರಲ್ಲಿ ಪ್ರಕೃತಿ, ಪರಿಸರ ಪ್ರೇಮವನ್ನು ಉತ್ತಮಪಡಿಸಲು ಹಾಗೂ ಪರಿಸರ ನಾಶಗೊಳಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಈ ಕೂಟದಲ್ಲಿ ಜಾಗೃತಗೊಳಿಸಲಾಗುತ್ತಿದೆ.

**ಹಿರಿಯ ವಿದ್ಯಾರ್ಥಿಗಳ ಸಂಘ :**



ಕಾಲೇಜಿನಲ್ಲಿ ವ್ಯಾಸಂಗ ಪೂರೈಸಿ ತೆರಳಿರುವ ವಿದ್ಯಾರ್ಥಿನಿಯರು ತಾವು ವ್ಯಾಸಂಗ ಮಾಡಿದ ಸಂಸ್ಥೆಯ ಬಗೆಗೆ ಗೌರವ ತಳೆಯುವಂತಾಗಬೇಕು, ಅದರೊಟ್ಟಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಬೇಕು ಮತ್ತು ಅವರು ಕಿರಿಯರಿಗೆ ತಮ್ಮ ಅನುಭವದ ಧಾರೆ ಎರೆಯುವಂತಾಗಬೇಕು, ಇವೇ ಮೊದಲಾದ ಉದ್ದೇಶಗಳನ್ನಿಟ್ಟುಕೊಂಡು ಹಿರಿಯ ವಿದ್ಯಾರ್ಥಿಗಳ ಸಂಘ ಅಸ್ತಿತ್ವದಲ್ಲಿದ್ದು ಕಾಲೇಜಿನ ಎಲ್ಲಾ ಚಟುವಟಿಕೆಗಳಲ್ಲೂ ಅವರು ಸಕ್ರಿಯವಾಗಿ ಭಾಗವಹಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

**ಸಮಾಲೋಚನಾ ಕೇಂದ್ರ :**


ವಿದ್ಯಾರ್ಥಿನಿಯರಲ್ಲಿ ಇರಬಹುದಾದ ಕೀಳರಿಮೆ, ಮಾನಸಿಕ ತಳಮಳ, ಖಿನ್ನತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ನಾವು ಮಾಡಿರುವ ಪ್ರಯತ್ನವೇ ಸಮಾಲೋಚನಾ ಕೇಂದ್ರ ಈ ಕೇಂದ್ರಕ್ಕೆ ಪ್ರಾಂಶುಪಾಲರು ಅಧ್ಯಕ್ಷರಾಗಿದ್ದು, ಒಬ್ಬ ಸಂಚಾಲಕರು ಹಾಗೂ ನಾಲ್ಕು ಜನ ಹಿರಿಯ ಅಧ್ಯಾಪಕರು ಸದಸ್ಯರಾಗಿರುತ್ತಾರೆ. ತಜ್ಞಮನಶಾಸ್ತ್ರಜ್ಞರು, ವೈದ್ಯರುಗಳಿಂದ ಉಪನ್ಯಾಸ ಹಾಗೂ ನೇರ ಮಾತುಕತೆಗಳ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನ ನಡೆಸಲಾಗುತ್ತಿದೆ. ಅಗತ್ಯವೆನಿಸಿದಲ್ಲಿ ವಿದ್ಯಾರ್ಥಿನಿಯರು ಸಮಿತಿಯ ಸದಸ್ಯರನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

**ಉದ್ಯೋಗ ಮಾರ್ಗದರ್ಶನ ಮಾಹಿತಿ ಹಾಗೂ ನೇಮಕಾತಿ ಕೇಂದ್ರ:**

ಯಾವುದೇ ಕಾಲೇಜಿನಲ್ಲಿ ಬಹುಮುಖ್ಯವಾದ ಘಟಕವೆಂದರೆ ಉದ್ಯೋಗ ಮಾರ್ಗದರ್ಶನ ಮಾಹಿತಿ ಹಾಗೂ ನೇಮಕಾತಿ ಕೇಂದ್ರ. ಶಿಕ್ಷಣವನ್ನು ಪೂರೈಸಿ ಪದವೀಧರರನ್ನಾಗಿಸುವುದಷ್ಟೇ ಅಲ್ಲದೆ ವಿದ್ಯಾರ್ಥಿನಿಯರು ಮುಂಬರುವ ದಿನಗಳಲ್ಲಿ ಎದುರಿಸಬಹುದಾದ ಉದ್ಯೋಗದ ಸವಾಲುಗಳ ಬಗ್ಗೆಯೂ ಮಾರ್ಗದರ್ಶನ ನೀಡಲಾಗುತ್ತಿದೆ. ಈ ದಿಶೆಯಲ್ಲಿ ಕೇಂದ್ರದ ವತಿಯಿಂದ ಶಿಬಿರಗಳು. ವಿಚಾರಸಂಕಿರಣಗಳು ಹಾಗೂ ವಿವಿಧ ವಿಷಯಗಳ ಬಗ್ಗೆ ಚರ್ಚೆಗಳನ್ನು ಏರ್ಪಡಿಸಲಾಗುತ್ತಿದೆ. ಇದಲ್ಲದೆ ವೃತ್ತಿಕೌಶಲ, ಸಂವಹನ ಕೌಶಲ, ಆಂಗ್ಲಭಾಷಾ

ಬಳಿಕ, ಕೌಶಲ ತರಬೇತಿ ವಾಣಿಜ್ಯೋದ್ಯಮದ ಬಗ್ಗೆ ತರಬೇತಿ ನೀಡಲಾಗುತ್ತದೆ. ಪ್ರಸಿದ್ಧ ಕಂಪನಿಗಳಾದ Infosys, BPM, Hire Mee ಮೊದಲಾದ ಸಂಸ್ಥೆಗಳಿಗೆ ಕಳೆದ ಸಾಲಿನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ.

### ಗಣಕವಿಜ್ಞಾನ / ಭಾಷಾ ಪ್ರಯೋಗಾಲಯ:



ಅತ್ಯಾಧುನಿಕ ಭಾಷಾ ಪ್ರಯೋಗಾಲಯವನ್ನು ಕಾಲೇಜು ಸಂಕೀರ್ಣದಲ್ಲಿರುವ ಎಲ್ಲಾ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಪ್ರಾರಂಭಿಸಲಾಗಿದೆ. ಇಲ್ಲಿನ ಪರಿಣಿತ ಸಿಬ್ಬಂದಿ, ವಿದ್ಯಾರ್ಥಿನಿಯರಿಗೆ ಭಾಷಾ ಉಚ್ಚಾರಣೆ, ಸಂಕೀರ್ಣತೆ ಮತ್ತು ಸುಲಲಿತವಾಗಿ ಮಾತನಾಡುವುದು ಇವುಗಳ ಬಗ್ಗೆ ಉತ್ತಮ ತರಬೇತಿ ನೀಡುತ್ತಾರೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಬಿ.ಪಿ.ಓ. ಮತ್ತಿತರ ಕೆಲಸಕ್ಕೆ ಸೇರಲು ಈ ತರಬೇತಿಯು ಬಹಳ ಅನುಕೂಲಕರವಾಗಿದೆ. ತನ್ಮೂಲಕ ವಿದ್ಯಾರ್ಥಿನಿಯರಲ್ಲಿ ಭಾಷೆ ಮತ್ತು ಭಾಷಾಕೌಶಲ್ಯಗಳನ್ನು ಉನ್ನ[illegible] ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ.

### ಇಂಟರ್‌ನೆಟ್ ಮತ್ತು ಇಮೇಲ್ ಸೌಲಭ್ಯ :

ಕಾಲೇಜಿನಲ್ಲಿ ಇಂಟರ್‌ನೆಟ್ ಮತ್ತು ಇ-ಮೇಲ್ ಸೌಲಭ್ಯಗಳನ್ನು ಒದಗಿಸಿದ್ದು ವಿಜ್ಞಾನ ಪ್ರಪಂಚಕ್ಕೆ ಸುಲಭ ಮಾರ್ಗ ಕಂಡುಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ.

### ದರ್ಪಣ ವಾರ್ಷಿಕ ಸಂಚಿಕೆ:




ವಿದ್ಯಾರ್ಥಿನಿಯರಲ್ಲಿ ಸುಪ್ತವಾಗಿ ಅಡಗಿರುವ ಸಾಹಿತ್ಯಕ, ಸಾಂಸ್ಕೃತಿಕ ಪ್ರತಿಭೆಗಳನ್ನು ಬರವಣಿಗೆಯ ಮೂಲಕ ಗುರುತಿಸಿ ಪ್ರೋತ್ಸಾಹಿಸಲು ಪ್ರತಿವರ್ಷವೂ 'ದರ್ಪಣ' ವಾರ್ಷಿಕ ಸಂಚಿಕೆ ಒಂದು ಉತ್ತಮ ಮಾಧ್ಯಮವಾಗಿ ಅತ್ಯಂತ ಸುಂದರವಾಗಿ, ಆಕರ್ಷಕವಾಗಿ ಪ್ರಕಟವಾಗುತ್ತಿದೆ. ವಿಶ್ವವಿದ್ಯಾನಿಲಯ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠವು ಆಯೋಜಿಸುವ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗಳಿಸಿದೆ. ಈ ಸಂಚಿಕೆಯಲ್ಲಿ ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಲೇಖನಗಳನ್ನು ಪ್ರಕಟಿಸಲಾಗುತ್ತದೆ.

### ವಿದ್ಯಾರ್ಥಿನಿಲಯ:

ಗ್ರಾಮಾಂತರ ಮತ್ತು ಇತರ ಪ್ರದೇಶಗಳಿಂದ ವಿದ್ಯಾಭ್ಯಾಸಕ್ಕಾಗಿ ಬಂದು ಕಾಲೇಜಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಕಾಲೇಜು ಸಮುಚ್ಚಯದಲ್ಲಿ ಸುಸಜ್ಜಿತವಾದ ವಿದ್ಯಾರ್ಥಿನಿಲಯ ಇದೆ. ಇದು ನಾಲ್ಕು ಅಂತಸ್ತಿನ ಕಟ್ಟಡವಾಗಿದ್ದು, 210 ವಿದ್ಯಾರ್ಥಿನಿಯರು ಉಳಿದುಕೊಳ್ಳಲು ಸುಸಜ್ಜಿತ ಕೊಠಡಿಗಳಿವೆ. ವಿಸ್ತಾರವಾದ ಪ್ರಾರ್ಥನಾ ಮಂದಿರ, ಊಟದ ಕೋಣೆ, ಅತಿಥಿಗೃಹ, ಗ್ರಂಥಾಲಯ ಸಹಿತ ಓದುವ ಕೋಣೆ, ಹೀಗೆ ಎಲ್ಲಾ ರೀತಿಯ ಆಧುನಿಕ ಸೌಲಭ್ಯಗಳನ್ನು ಒಳಗೊಂಡಿದೆ. ಧನಸಹಾಯ ಆಯೋಗದ ಅನುದಾನದಲ್ಲಿ ಸುಮಾರು 1.2 ಕೋಟಿ ವೆಚ್ಚದಲ್ಲಿ ಈ ವಿದ್ಯಾರ್ಥಿನಿಲಯವನ್ನು ನಿರ್ಮಿಸಲಾಗಿದೆ.



# JSS Mahavidyapeetha




In the sylvan surrounding of Kapila, a tributary of the legendary Cauvery, there arose in the spiritual firmament a thousand years ago, a Sage, Adi Jagadguru Sri Shivarathreeshwara Shivayogigalu, whose divine imprints on the sands have inspired and led the successive pontiffs towards the upliftment of society, in all aspects. The Sage founded Jagadguru Sri Veerasimhasana Math at Sutturu, 28 kms South of Mysuru, to propagate the message of Dharma and inculcate Dharmik qualities in the minds of people. Although the primary objective at first of founding the Sri Math was to lead the people on the path of righteousness, with the passage of time, the Sri math has attended itself to the demands of time and acquired a multidimensional approach, to the socieal upliftment. The Math has transformed itself into a centre of cultural, religious, educational, economic and social enrichment culminating in acquiring a multifarious facet.

Jagadguru Dr. Sri Shivarathri Rajendra Mahaswamiji, the 23rd pontiff of Sri Math, founded JSS Mahavidyapeetha in 1954, with the objective of carrying forward the torch of knowledge to all sections of the population, including women and weaker sections. JSS Mahavidyapcedia now administers more than 300 institutions, covering the entire gamut of education including general, technical and medical. JSS Mahavidyapeedia has heralded a silent revolution by taking education to the doorsteps of common people. Every year new establishment of learning enjoin the fold of JSS Mahaviyapeeth making education more need based and tailor made for the demands of time.

The present pontiff Jagadguru Sri Shivarathri Deshikendra Mahaswamiji, the 24th head of holy seat, is precision and perfection personified. His Holiness has been successfully carrying the onerous responsibility ascribed upon him by his illustrious predecessor. Being a progressive thinker and a zealous reformist, he is relentlessly striving to empower JSS Mahavidyapeetha to meet the challenges of the present century. His Holiness is mercurial in responding to the sufferings of the multitude. Swamiji took the initiative, voluntarily, in mobilizing monetary and material support, by initiating 'Mysore Citizen Forum' to the flood victims of North Karnataka. His timely initiative offered solace and brought hopes back to the lives of millions in North Karnataka. Under the able guidance of His Holiness, the offshoots of JSS Mahavidyapeeth have spread beyond the shores of the nation. Truly JSS Mahavidyapeetha is touching the lives of mankind in myriad ways.




## JSS College for Women, Kollegal

Located in the heart of Kollegal the college has been a premier institute of higher learning in the town ever since its establishment in 1983. Sponsored and nurtured by JSS Mahavidyapeetha, the college has been imparting quality education to all sections of society, especially the weaker and the deprived.

The college has excellent infrastructural facilities like well equipped laboratories, spacious and digital classrooms, multimedia facilities and well-stacked library. Uniquely designed building and landscaped surroundings give the college a pleasing ambience, conducive to learning. The college has an extremely vibrant academic atmosphere, ably supported by extra curricular and extension activities. A team of committed faculty enthusiastic to help students in all their academic endeavours, is the highlight of the college.

The college aims to inculcate a pluralistic, egalitarian and cosmopolitan outlook among the students and provide various forums to tap the talent of its students. In recognidon of the quality of education being disseminated by the institution, the NAAC has reaccredited the college with 'B' grade.


The college offers different combinations in three streams (Arts, Commerce & Business Administration) at undergraduate level & M.Com at postgraduate level.

In order to provide opportunities to stakeholders a number of academic and non-academic functional units are established.

- Anti Ragging Cell
- Placement Cell
- Grievance Redressal Cell
- Youth Recreation Club
- IQAC/RUSA/UGC/NAAC
- Sports and Cultural Forum
- Founder's Day Celebration Samithi
- Teacher Parent Association
- Career Guidance & Counseling Cell
- NSS, Scouts and Guides
- Red Ribbon Club
- Innovation Club

The college not only aims at imparting quality education but also assists students in shaping their future. The Placement cell is functioning effectively to enable the students to be employed. Infosys-BPM, Hire Mee and others visit the campus regularly on Campus Recruitment Drive.

The College plays a pro-active role in nurturing students to grow into independent, intelligent cultured & respectable citizens of the society.



# From the Principal's Desk.....

**Prof. Umesha**
Principal

It gives me immense pleasure to place before you, the prospectus of our College. I also take this opportunity to congratulate you for having chosen our College, one of the premier institutes of higher learning in Kollegal town. It is a matter of pride to bring to your notice that the College had been Re-accredited by NACC with 'B' Grade. The college evolves and executes progressive pedagogy both at the undergraduate and postgraduate levels.

The institution offers excellent academic and infrastructural facilities which include well stacked library smart class rooms, Wi-Fi enabled campus, well equipped Computer lab, language Lab, Business lab etc. Of the total strength nearly 65% of students belong to scheduled caste, scheduled tribe, other backward classes, minorities and economically weaker groups. There by, the college ensures that the education is provided to all those who stand in the periphery of the society.

The institution has a team of experienced and dedicated teachers, who ensures not only dissemination value based education but also guides students in all their academic endeavors. It is a matter of pride to place it on record that the administration of the college is not only systematic but also transparent which further ensures a better facility to students and parents.

Besides, the college has a proactive counseling and placement cells, the college strives hard to nurture the cultural and literary talents of the students. The indoor Auditorium in the college is a testimony to this.

The physical education department of the college encourages the sports aspirations of the students. The college provides a well equipped multi-gym to facilitate sports activities. The college has well equipped indoor and outdoor play grounds. Our students regularly take part and have won encomiums both at the University and State-level sports competitions.

The college has scaled new heights and glory because of the blessings of His Holiness Jagadguru Sri Shivarathri Deshikendra Mahaswamiji and continuous support and guidance from JSS Mahavidyapeetha.

The Governing Body of the college meets twice in a year and recommends steps to be adopted for the overall growth of the institution, which are duly implemented.

The prospectus provides you, in a nutshell, the facilities and opportunities made available to students. I warmly welcome each one of you to this great institution, with the hope that you will judiciously utilize all the opportunities provided for your benefit and self groom into responsible citizens to serve the nation.

Once again, I wish you a happy time in the campus.

# GOVERNING BODY

| No. | Members | Position |
|---|---|---|
| 1 | **Jagadguru His Holiness Sri Shivarathri Deshikendra Mahaswamiji**<br>President<br>JSS Mahavidyapeetha, Mysuru | Chairperson |
| 2 | **Dr. C G Betsurmat,** IAS (Rtd)<br>Executive Secretary<br>JSS Mahavidyapeetha, Mysuru | Member |
| 3 | **Prof. Morabada Mallikarjuna**<br>Director<br>College Education Division Mysuru<br>JSS Mahavidyapeetha, Mysuru | Member |
| 4 | **Prof. Aisha Sharilf**<br>Dean, Faculty of Commerce &<br>Prof. Dept of Administrative Science &<br>Business Administrative,<br>Manasagangotri, Mysuru | University Nominee |
| 5 | **Dr. S. Shivarudraswamy**<br>Mudaveerappa Memorial Hospital, Kollegal | Member |
| 6 | **Sri S. P. Pasupathi**<br>Tax Consultant, Kollegal | Member |
| 7 | **Prof. B.Somanna**<br>Associate Professor, Department of Economics<br>JSS College for Women, Kollegal | Member |
| 8 | **Dr. M. Prabhu**<br>Assistant Professor, Department of Commerce<br>JSS College for Women, Kollegal | Member |
| 9 | **Prof. Umesha, Principal**<br>JSS College for Women, Kollegal | Member Secretary |

# TEACHING STAFF

**Sri UMESHA**
Principal & Associate Professor

| | |
|---|---|
| **Kannada** | |
| Sri Basavaraju M | Assistant Professor & Head |
| Sri Nagabhusana H.M | Assistant Professor |
| **English** | |
| Sri Mahadevappa A.P | Assistant Professor & Head |
| **History** | |
| Sri Natarajan H.G | Assistant Professor & Head |
| Sri Sampathu | Assistant Professor |
| **Economics** | |
| Sri Somanna B. | Associate Professor & Head |
| Smt. Puttamma | Assistant Professor |
| **Political Science** | |
| Sri Guruprasad K.R | Assistant Professor & Head |
| Smt. Suma G.S | Assistant Professor |
| Sri Prakasha K.S | Assistant Professor |
| **Geography** | |
| Smt. Smitha A.S | Assistant Professor & Head |
| Sri Shiva V. | Assistant Professor |
| **Commerce** | |
| Dr. Prabhu M | Assistant Professor & Head |
| Smt. Sowmya R.P | Assistant Professor |
| Sri Suresh | Assistant Professor |
| Sri Basavadatta Mahadevaprasad C.S | Assistant Professor |
| Kum. Manuja | Assistant Professor |
| Kum. Vidyashree N.M | Assistant Professor |
| Kum. Amrutha S | Assistant Professor |

### Business Administration

| | |
|---|---|
| Smt. Mamatha S | Assistant Professor & Head |
| Smt. Bhramaramba N | Assistant Professor |
| Smt. Vani N | Assistant Professor |
| Kum. Tejaswini M | Assistant Professor |
| Sri Mahesh D.R | Assistant Professor |

### Computer Science

| | |
|---|---|
| Sri Pradeep D.B | Assistant Professor & Head |

### Teaching Staff (PG)

| | |
|---|---|
| Dr. Prabhu M | Head, PG Department of Commerce |
| Kum. Saraswathi S | Assistant Professor |
| Sri Mahesh P | Assistant Professor |
| Kum. Archana M | Assistant Professor |

### Library and Information Centre

| | |
|---|---|
| Sri Srinivasa | Librarian |
| Sri Shivu | Library Assistant |

### Administrative Staff

| | |
|---|---|
| Sri Manjegowda | Superintendent |
| Sri Kumara Swamy | FDA |
| Sri Shadaksharappa | SDA |
| Smt. Anitha B. | SDA |
| Sri Madhushalini P. | SDA |
| Smt. Katyayini B. | SDA |
| Sri Mahadevaswamy B. | Attender |
| Sri Prabhuswamy | Peon |
| Sri Virupakshamurthy | Peon |
| Sri Dasaiah | Watchman |

## Programmes and Combinations Offered (UG)

| Sl.No. | Course | Combinations | Medium |
|---|---|---|---|
| 1 | BA | History, Economics, Political Science (HEP)<br>History, Economics, Kannada (HEK)<br>History, Economics, Geography (HEG | Kannada |
| 2 | B.Com | As per University of Mysore | English |
| 3 | BBA | As per University of Mysore | English |
| | | **Certificate Courses** | |
| 1 | BA<br>B.Com<br>BBA | Computer Course | English |
| 2 | BA<br>B.Com<br>BBA | Spoken English | English |
| 3 | BA<br>B.Com<br>BBA | Indian Culture | Kannada |
| 4 | B.Com. | a) International Finanacial Reporting Standards (IFRS)<br>b) Human Resource Management (HRM) | English |
| 5 | BBA | a) Auditing<br>b) Marketing | English |

## ADMISSION REQUIREMENTS

* Application can be had from the college office
* Filled-in applications shall be accompanied by
  - a) Attested copy of SSLC Marks card
  - b) Attested copy of Income Certificate
  - c) Attested copy of Caste Certificate
  - d) Attested copy of Aadhar Card
  - e) Second year PUC marks card (Original)
  - f) Original Transfer Certificate
  - g) Attested copy of Bank pass book
  - h) Two recent passport size photographs

## ADMISSION PROCEDURE

1. Direct Admission for BA and BBA
2. Admission is on Seat Matrix Base for B.Com.

## REGULARITY

1. 75% Attendance in each subject and in each semester is compulsory as per the University of Mysore Regulations.
2. Students with less than 75% of attendance are not permitted to appear for examination
3. Students shall complete their degree within the double duration. i.e. maximum of 6 years.
4. Use of cell phones inside the campus is strictly prohibited.
5. Ragging activities are strictly banned inside the campus as per UGC norm.
6. Evaluation of college and teachers is mandatory as per UGC norm.
7. Medium of instruction is Kannada for BA and English for B.Com and BBA. However student is allowed to write the examination either in Kannada or English.
8. Every student shall adopt the following five principles inside the campus and outside.
   a. Save Water and Electricity
   b. Avoid Plastics
   c. Do not waste food
   d. Keep campus clean
   e. Keep campus green

## LIBRARY



The library is automated with Easy Lib software. It has spacious reading room and reference sections. The total number of books are 19,641. It is well furnished with a good collection of books and subscribed to 48 periodicals 17 newspapers.

The Library has subscribed to E-Journals through INFLIBNET consortium with N-list members for both students and staff. It is desired that the students spend their free time either in the reading room or reference section between 9 am to 5 pm on all working days. The library is extending all its service to alumni of the college.

## SCHOLARSHIPS, CASH INCENTIVES AND OTHER FINANCIAL ASSISTANCE

Several scholarships are awarded to our students both by central and State Governments, JSS Mahavidyapeetha, Teachers and Donors special care will be taken by the college to see that every eligible student shall apply and be awarded.

## SCHOLARSHIP INSTITUTED BY GOVERNMENT

* Government of India Scholarship to SC/ST students.
* Post Metric Scholarship to category - I, IIA, IIB, IIIA, IIIB
* Sir C.V. Raman Scholarship

* Sanchi Honnamma Scholarship
* EBL Scholarship
* Minority Scholarship
* Indira Gandhi Girls Single Child Scholarship for PG Students
* For specially challenged scholarships
* MHRD Scholarship
* Rajiv Gandhi Scholarship



## LITERARY AND CULTURAL FORUM

The literary and cultural Forum provides an outlet to the students to showcase their hidden talents. They are trained to organize functions, develop leadership qualities, personality and talent under the banner of this Forum.

## ANTI RAGGING

Ragging, in any form, is totally banned in the entire College Campus. we take stringent action against those who found guilty, as per the provisions of the Central and the State Governments.




## SPORTS FORUM



Education is not complete without cultural and sports education. The college gives equal importance to academic and sports activities. the college has good sports facilities both for indoor and outdoor games. Our students have brought laurels and encomiums to the college at university. State and national level games "A-state-of-the-art multi-gym with financial assistance from UGC has been provided for the benefit of students.

## ALUMNI ASSOCIATION

This Association aims at bringing together our former and present students under one roof and help the incumbent students to get the benefit of their predecessors' experience.



## INTERNET AND WiFi CONNECTIVITY

Internet and e-mail facilities have been provided to help the students to have an easy access to the treasure house of universal knowledge.

## STUDENTS CONSELLING CELL

The removal of the inhibitions, complexes, depressions and such other problems of the fresh entrants and other students of the college needs to be done in the institutions. For this a cell has been established which consists of three staff members, a coordinator with the principal as the chairperson. Every week on Tuesday a psychologist appointed by District collector office visits the college and counsels the students who are in need of counselling.

## CAREER, GUIDANCE AND PLACEMENT CELL

The college believes not merely in completing the syllabi and [illegible] the examinations but also guiding and helping them in getting jobs, [illegible] placement cell organizes workshops, seminars and special lectures [illegible] training classes for competitive exams. Infosys-BPM, Hire Mee [illegible] recuiting students from different streams every year and our stu[illegible] placement officer to attend the on campus recruitment drive held in our sister institutions.

## COMPUTER / LANGUAGE LABORATORY



With the emergence of English as a global language, the college has established language lab to improve the English language skills of the students. It is being upgraded by installing new software. The learning contents covering the essentials of grammar, reading, listening, writing and speaking. Pronounciations and personality development of students are available in this software. It also ensures that students can prepare for their on campus interviews and their career after they graduate from the college.

## Hostel facility

A well furnished hostel, situated within the campus, accommodating 210 students is one of the highlights of the campus, Inmates are housed in safe and secured environment much to the relief of the parents. It is new building, with four stairs, a big prayer hall, dining hall, guest room, reading room with library, all other modern amenities constructed at the cost of 1.2 cr. with the financial assistance of UGC.





## Darpana

"Darpana", the college magazine, provides an ideal platform for the students to nurture their creativity, articles, poems, illustrations and write-ups are invited from students, edited and published in this magazine. It has won many prizes at the JSS institutions and university level.

## NSS Unit



The college has one NSS Unit. "Service through education and education through service" is the motto of NSS. It exposes our students to real life situations and facilitates them to adapt themselves to the realities of life. Volunteers are actively involved in various constructive activities through Shramadana and Annual Special Camps in remote villages.



## Parent - Teacher Cell

The college makes a privision for Parent - Teacher meet to address the problems of students and their suggestions twice in a year. It will be held under the presence of representative from the management.

## Educational Tour

The college has a Tour Committee which arranges educational tours for students of all programmes and enable the students to enrich their knowledge.

## Club / Committees

Apart from the above, the college constitutes every year various other clubs/committees which activate functions for the benefit of the students. Namely;

* Anti-Ragging Cell
* Women Sexual Harassment prevention cell
* Commerce Club
* Youth Red Cross Wing
* Red - Ribbon Club
* Sahitya Sangama
* Planning Forum
* Equal Opportunity Cell
* Eco-Club
* History Club
* National Festivals Celebration Committee
* Founders' Day Celebration Committee
* RUSA
* UGC
* IQAC
* Placement Cell
* Student Counselling Unit
* Innovation Club Etc.

# POST GRADUATE DEPARTMENT

Understanding the immense need of higher education to the people of economically backward town of Kollegal and with the Mission of taking Post Graduate degree in Commerce to the doorsteps of Commerce graduates in the remote taluk of Kollegal, Post graduate centre was started in the campus in the year 2001-02.

Department of studies in Commerce is affiliated to University of Mysore, offering M.Com (Master of Commerce), a two year full time course, consisting of four semesters under choice based credit system (CBCS). The CBCS was introduced in the year 2010 by University of Mysore, is an advanced mode of learning in Higher Education wherein a student has the freedom [illegible] choices.

## Eligibility

a) B.Com/BBA/BBM with a minimum of 48% (45% in case of SC/ST Category Candidates) of marks in congnate subjects put together from all the year of examination/course.

## Seminars/Workshops/Special Lectures

Seminars and workshops are conducted regularly on the relevant topics. Teachers as well as students are motivated to present research papers, participate in seminars, workshops etc. Special lectures are held through the year by inviting eminent persons from all fields to interact with the students.

## Industrial Tour

The industrial tour is arranged every year to give a practical exposure to the students.

## Scholarship

The college takes care of scholarships available to SC, ST, OBC students and all deserving students. The college takes it as its responsibility to see that every eligible student is awarded his/her scholarship.

## Hostel Facility

Hostel facility is available within the campus for girl students. The hostel is well equipped and well maintained with its own reading room, recreation room, big prayer / yoga hall, etc.

## Infrastructure

The Post Graduate Centre is the part of the college, having its own smart class rooms and internet facilities. Well equipped and fully automated library and information centre, Wi-Fi enabled computer Lab, ICT enabled seminar hall are at the usage of Post Graduate students. Research activities are encouraged in the Centre through JSS Research Foundation.

# ALUMNAE'S SPEAK


Divya


Anusha K.

I am proud to be an alumna of JSS College for Women, Kollegal. The college provides the best atmosphere to grow. I sincerely appreciate the dedicated efforts of the college in bringing out the best in students. Faculty members are knowledgeable, enthusiastic, committed and well prepared.

I feel very happy to call myself as alumna of JSS College for Women, Kollegal, having been a student of M.Com. It is one of the premier colleges of higher learning in Kollegal. It has an excellent ambiences condusive for academic pursuance. I am indebted to JSS Mahavidyapeetha and the College for what I have achieved today.


Chandrika


Jyothi

JSS College for Women, Kollegal empowers in all the ways to the aspiring students to excel in the field of their interest. Dedicated teachers, good infrastructure, co-curricular activities, efficiently updated library adds to the glory of the education. I am very glad to be part of the institution which helped me a lot in improving my skill set.

The framework of my dream of success was well mentored by genius, talented, and dedicated teachers. The competitive environment prevailing in the campus energized us to do more and to be emerged as winners.


Nagaveni K.


Bindu

I am very happy that I selected this college for my higher education wherein regular seminar and co-curricular activities provided me a good opportunity to boost my confidence. Secured, hygienic, well disciplined hostel with various committees provides healthy environment for the studies.

I take this opportunity to congratulate all of you for having chosen this college. I wish you all the best.

## PLEASE FEEL FREE TO CONTACT

| | Name | Disgnation | Contact No. | Email ID |
|---|---|---|---|---|
|  | **Prof. Umesha** | Principal | 9480244096 | umeshamudiundam@gmail.com |
|  | **Sri Basavaraju M.** | PRO | 9980659851 | basavarajum1972@gmail.com |
|  | **Sri Manjegowda** | Superintendent | 9449129993 | mangegowda58@yahoo.com |

# EXTENTION ACTIVITIES



Special Lecture



Special Lecture



Annual Sports



ಮೈಸೂರು ದಸರಾ–ಯುವ ಸಂಭ್ರಮದಲ್ಲಿ ಭಾಗವ[illegible]ದ್ಯಾರ್ಥಿನಿಯರು

Sri Rajendra Printers & Publishers, Shivarampete, Mysuru. Ph : 2476019